OS 187/2014 PW-1

ದಿನಾಂಕಃ **22-10-2024**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಕೆ ವಕೀಲರಿಂದಃ

ನೀವು 9 ತಿಂಗಳ ಮಗುವಾಗಿದ್ದಾಗ ನಿಮ್ಮ ತಾಯಿ ತೀರಿಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ 5 ವರ್ಷ ವಯಸ್ಸಾಗಿದ್ದಾಗ ನನ್ನ ತಾಯಿ ತೀರಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ತಾಯಿ ತೀರಿಕೊಂಡ ನಂತರ ನನ್ನ ತಂದೆ ರುದ್ರಮ್ಮನವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ರುದ್ರಮ್ಮನವರ ಮೂಲಕ ಪ್ರಕಾಶ್ ಎಂಬ ಮಗ ಮತ್ತು ಚೌಡಮ್ಮ ಎಂಬ ಮಗಳು ಇರುತ್ತಾರೆ ಎಂದರೆ ಸರಿ.

ದಾವಾ ಸ್ವತ್ತು ನನ್ನ ತಂದೆಯಿಂದ ಬಂದಂತಹ ಸ್ವತ್ತು ಎಂದು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ನೀವು ಈ ದಾವೆಯನ್ನು ನಿಮ್ಮ ತಂದೆಯ 2 ನೇ ಹೆಂಡತಿ ಮತ್ತು ಅವರ ಮಕ್ಕಳ ಬಗ್ಗೆ ನಮೂದು ಮಾಡದೇ ಸುಳ್ಳು ವಂಶವೃಕ್ಷವನ್ನು ಹಾಜರುಪಡಿಸಿರುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ದೊಡ್ಡ ಹೆಂಡತಿಯ ಮಗ ನಾನು ಒಬ್ಬನೇ ಆಗಿದ್ದು , ಅವರು ಊರಲ್ಲಿ ಇಲ್ಲದೆ ಎಲ್ಲೋ ಹೋಗಿದ್ದ ಕಾರಣ ಅವರನ್ನು ಸೇರಿಸಿಲ್ಲ ಎಂದು ಉತ್ತರಿಸಿರುತ್ತಾರೆ. ಈ ದಾವೆಯನ್ನು ಹೂಡುವ ಸಮಯದಲ್ಲಿ ನಾನು ಪ್ರಕಾಶ್ ಮತ್ತು ಚೌಡಮ್ಮನವರನ್ನೂ ಸಹ ನನ್ನೊಂದಿಗೆ ದಾವೆ ಹೂಡಲು ಕೇಳಿರುತ್ತೇನೆ , ಆಗ ಅವರು ದಾವಾ ಸ್ವತ್ತುಗಳು ನಮಗೆ ಸೇರಿರುವುದಿಲ್ಲ , ನಾವು ನಿನ್ನೊಂದಿಗೆ ಬರುವುದಿಲ್ಲ ಎಂದು ಹೇಳಿದ ಕಾರಣ ಅವರನ್ನು ಬಿಟ್ಟು ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

ದಾವಾ ಸ್ವತ್ತನ್ನು ಹೊರತು ಪಡಿಸಿ ನನ್ನ ತಂದೆಗೆ ಬೇರೆ ಆಸ್ತಿಗಳು ಸಹ ಇದ್ದವು. ಕೊಡಗದಾಲ ಗ್ರಾಮದಲ್ಲಿನ ಆಸ್ತಿಗಳನ್ನು ನೀವು ಮತ್ತು ನಿಮ್ಮ ತಮ್ಮ ಪ್ರಕಾಶ್ ವಿಭಾಗ ಮಾಡಿಕೊಂಡಿರುತ್ತೀರಾ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ವಿಭಾಗ ಮಾಡಿಕೂಂಡಿರುತ್ತೇವೆ

ನಂತರ ಅವರ ಪಾಲಿನ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತುಗಳನ್ನು ನಾವು ವಿಭಾಗ ಮಾಡಿಕೊಂಡಿರುವುದಿಲ್ಲ.

ದಾವಾ ಸ್ವತ್ತುಗಳು ನಿಮ್ಮ ಕುಟುಂಬದ ಆಸ್ತಿಗಳು ಆಗದೇ ಇರುವ ಕಾರಣ ನೀವು ವಿಭಾಗ ಮಾಡಿಕೊಂಡಿರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿದ್ದು , ಅವುಗಳನ್ನು ನಮ್ಮ ತಂದೆ ವಿಭಾಗ ಮಾಡಿಕೊಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತುಗಳಲ್ಲಿ ನಿಮ್ಮ ತಮ್ಮನಿಗೂ ಸಹ ½ ಹಿಸ್ಸೆ ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಇರುತ್ತದೆ ಎಂದು ಉತ್ತರಿಸಿರುತ್ತಾರೆ.

ಪ್ರಸ್ತುತ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿ ಯಾರ ಹೆಸರಿನಲ್ಲೂ ಸಹ ಬರುತ್ತಿರುವುದಿಲ್ಲ. ಆರ್ ಆರ್ ಟಿ (D)1/14-15 ರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಪ್ರಕರಣದಲ್ಲಿ 5 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ವರ್ಗಾವಣೆ ಮಾಡುವಂತೆ ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆದೇಶದ ಮೇರೆಗೆ ಮತ್ತು ನೋಂದಣಿ ಕ್ರಯಪತ್ರದ ಮೇರೆಗೆ ದಾವಾ ಸ್ವತ್ತುಗಳ ಖಾತೆ 5 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆಗೆ ಒಂದೇ ಕ್ರಯಪತ್ರ ಆಗಿರುತ್ತದೆ. ನನ್ನ ತಂದೆಗೆ 1 ಎಕರೆ 22 ಗುಂಟೆ ಜಮೀನಿಗೆ ಕ್ರಯಪತ್ರ ಆಗಿರುತ್ತದೆ. ಸದರಿ ಮೂಲ ಕ್ರಯಪತ್ರ ಮಳೆಯಿಂದ ಮನೆ ಬಿದ್ದು ಹೋದಾಗ ಮಣ್ಣಿನಲ್ಲಿ ಸೇರಿಕೊಂಡಿರುತ್ತದೆ ನಂತರ ನಮಗೆ ಸಿಕ್ಕಿರುವುದಿಲ್ಲ. ಸದರಿ ಕ್ರಯಪತ್ರದ ಮೇರೆಗೆ ನಿಮ್ಮ ತಂದೆ ಹೆಸರಿಗೆ ಮ್ಯುಟೇಶನ್ ಆಗಿರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಪಹಣಿ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತಿನ ಪಹಣಿಯ ಮಾಲೀಕರ ಕಾಲಂ ನಂಲ್ಲಿ ನನ್ನ ತಂದೆ ಹೆಸರು ಬಂದಿರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

OS 187/2014 PW-1

ದಾವಾ ಸ್ವತ್ತನ್ನು ನನ್ನ ತಂದೆ ತಿಮ್ಮನಹಳ್ಳಿ ಯ ರಂಗಶಾಮಯ್ಯನ ಮಗ ತಿಮ್ಮಯ್ಯ ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತನ್ನು ತಿಮ್ಮಯ್ಯ ಕಣವಪ್ಪನವರಿಂದ ಖರೀದಿ ಮಾಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ನಮ್ಮ ತಂದೆಯ ಮಾರಾಟಗಾರರು 2 ಸ್ವತ್ತುಗಳನ್ನು ಖರೀದಿ ಮಾಡಿದ್ದರಿಂದ ಮೂಲ ಕ್ರಯಪತ್ರವನ್ನು ನಮಗೆ ನೀಡಿರುವುದಿಲ್ಲ.

ರಂಗಶಾಮಯ್ಯನ ಮಗ ತಿಮ್ಮಯ್ಯನವರನ್ನು ನಾನು ನೋಡಿದ್ದೇನೆ. ಸದರಿ ತಿಮ್ಮಯ್ಯ ಹಲವಾರು ಪ್ರಕರಣಗಳನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಸರಿ, ಸದರಿ ತಿಮ್ಮಯ್ಯ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸದರಿ ತಿಮ್ಮಯ್ಯ ನಾಮಕಾವಸ್ತೆಯ ಕ್ರಯಪತ್ರಗಳನ್ನು ಬರೆಸಿಕೊಂಡು ಹಣ ಸಾಲ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ 01-12-1969 ರ ಕ್ರಯಪತ್ರ ನಾಮಕಾವಸ್ತೆ ಕ್ರಯಪತ್ರ ಆಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

ದಿಃ 01-12-1969 ರ ಕ್ರಯಪತ್ರದ ಆಧಾರ ದ ಮೇಲೆ ತಿಮ್ಮಯ್ಯ ಬಿನ್ ರಂಗಶಾಮಯ್ಯ ದಾವಾ ಸ್ವತ್ತಿನ ಸ್ವಾಧೀನಕ್ಕೆ ಬಂದಿರುವುದಿಲ್ಲ ಮತ್ತು ಮಾಲೀಕತ್ವದ ಹಕ್ಕನ್ನು ಸಹ ಅನುಭವಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಿಃ 01-12-1969 ರ ಕ್ರಯಪತ್ರದ ಆಧಾರದ ಮೇರೆಗೆ ಯಾವುದೇ ಮ್ಯುಟೇಶನ್ ಆಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ತಿಮ್ಮಯ್ಯ ಬಿನ್ ರಂಗಶಾಮಯ್ಯ ಸಾಲ ನೀಡಿದ್ದಂತಹ ಸಂಪೂರ್ಣ ಹಣವನ್ನು ಮರುಪಾವತಿಸಿದ ನಂತರ ನನ್ನ ತಂದೆ ನಾಮಕಾವಸ್ತೆ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

ನನ್ನ ತಂದೆ ಅಥವಾ ತಿಮ್ಮಯ್ಯ ಬಿನ್ ರಂಗಶಾಮಯ್ಯ ಯಾವುದೇ ದಿನದಂದು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯ ತಂದೆಯವರು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿರುತ್ತಾರೆ , ಆದರೆ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ನಮ್ಮ ಬಳಿ

ಇರುವುದಿಲ್ಲ. ದಾವಾ ಸರ್ವೆ ನಂ. ಸ್ವತ್ತನ್ನು 1 ರಿಂದ 4 ನೇ ಪ್ರತಿವಾದಿಗಳು ದಿಃ 15-12-2012 ರಂದು ನ್ಯಾಯಾಲಯದ ತೀರ್ಪಿನಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಆದೇಶದಂತೆ 1 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಮ್ಯುಟೇಶನ್ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ 24-03-2014 ರಂದು 1 ನೇ ಪ್ರತಿವಾದಿ ದಾವಾ ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ಖರೀದಿ ಮಾಡಿದ್ದರಿಂದ ನಾವು ದಾವೆಯನ್ನು ಹೂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

ದಾವಾ ಸ್ವತ್ತು ಯಾವ ಕಾರಣಕ್ಕಾಗಿ ಪೋಡಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.ನಿಪಿ-29 ನ್ನು ನಾನು ಸದರಿ ಸಹಕಾರ ಸಂಘದ ಕಾರ್ಯದರ್ಶಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಸಾಲ ಪಡೆಯಲು ನೀಡಿದಂತಹ ಅರ್ಜಿ ಮತ್ತು ಸಾಲ ಮರುಪಾವತಿ ಮಾಡಿದ ರಶೀತಿಗಳು ಇರುತ್ತವೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅದು ನಮ್ಮ ತಂದೆಗೆ ಗೊತ್ತಿರುತ್ತದೆ ಎಂದು ಉತ್ತರಿಸಿರುತ್ತಾರೆ.

2014 ರ ನಂತರ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 5 ನೇ ಪ್ರತಿವಾದಿ ಬ್ಯಾಲ್ಯಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಸಾಲ ಇಂದಿಗೂ ಸಹ ಚಾಲ್ತಿಯಲ್ಲಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

ತಿಮ್ಮಯ್ಯ ಬಿನ್ ರಂಗಶಾಮಯ್ಯನವರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು , ಅಧಿಕಾರ ಇಲ್ಲದ ಕಾರಣ ನಿಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಬರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ

ನಾಮಕಾವಸ್ಥೆ ಕ್ರಯಪತ್ರದ ಮೇಲೆ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ